# www.karunaduexams.com

**ದಿನಾಂಕ 20/11/2016, ಭಾನುವಾರದಂದು ನಡೆದ ಪಿಡಿಓ/ಕಾರ್ಯದರ್ಶಿ ಗ್ರೇಡ್-1 ಹುದ್ದೆಗಳ ಅಣುಕು ಪರೀಕ್ಷೆ-3 ರ ಉತ್ತರ ಪತ್ರಿಕೆ.**

www.karunaduexams.com

1. ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರಲ್ಲಿ ಜಿಲ್ಲೆಯ ತಾಲ್ಲೂಕುಗಳಿಂದ ಚುನಾಯಿತರಾದ _______ ಕ್ಕಿಂತಲೂ ಕಡಿಮೆಯಲ್ಲದ ಸದಸ್ಯರು ಇರತಕ್ಕದ್ದು?

   ಅ) ಹತ್ತು

   ಆ) ಹದಿನೈದು

   ಇ) ಇಪ್ಪತ್ತು

   ಈ) ಇಪ್ಪತ್ತೈದು

   ಇಪ್ಪತ್ತು

   ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರಲ್ಲಿ ಜಿಲ್ಲೆಯ ತಾಲ್ಲೂಕುಗಳಿಂದ ಚುನಾಯಿತರಾದ ಇಪ್ಪತ್ತಕ್ಕಿಂತಲೂ ಕಡಿಮೆಯಲ್ಲದ ಸದಸ್ಯರು ಇರಬೇಕು. ಇದರ್ಥ ಜಿಲ್ಲಾ ಪಂಚಾಯತಿ ಕನಿಷ್ಠ 20 ಸದಸ್ಯರನ್ನು ಒಳಗೊಂಡಿರಬೇಕು.

2. ಜಿಲ್ಲಾ ಪಂಚಾಯತಿಯು ಈ ಕೆಳಗಿನ ಯಾರನ್ನು ಒಳಗೊಂಡಿರುವುದಿಲ್ಲ?

   I) ರಾಜ್ಯ ಸಭೆ ಮತ್ತು ರಾಜ್ಯ ವಿಧಾನ ಸಭೆ ಸದಸ್ಯ

   II) ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ

   III) ಆಯ್ದಾ ಗ್ರಾಮ ಪಂಚಾಯತಿಗಳ ಅಧ್ಯಕ್ಷ

   IV) ನಗರಸಭೆಗಳ ಅಧ್ಯಕ್ಷ

   ಸರಿಯಾದ ಉತ್ತರವನ್ನು ಈ ಕೆಳಗೆ ನೀಡಿರುವ ಕೋಡ್ ಮೂಲಕ ಉತ್ತರಿಸಿ:

   ಅ) I & II

   ಆ) III & IV

   ಇ) I & III

   ಈ) II & IV

   III & IV

   ಜಿಲ್ಲಾ ಪಂಚಾಯತಿಯು ಚುನಾಯಿತ ಸದಸ್ಯರನ್ನ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರನ್ನ (ವ್ಯಾಪ್ತಿಗೆ ಒಳಪಡುವವರು ಮಾತ್ರ), ಜಿಲ್ಲಾ ವ್ಯಾಪ್ತಿಯೊಳಗೆ ಮತದಾರರೆಂದು ನೋಂದಾಯಿತರಾದ ರಾಜ್ಯ ಸಭೆ ಸದಸ್ಯ ಮತ್ತು ರಾಜ್ಯ ವಿಧಾನಸಭೆ ಸದಸ್ಯರನ್ನು ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯತಿ ಅಧ್ಯಕ್ಷರನ್ನು ಒಳಗೊಂಡಿರಬೇಕು.

3. ಜಿಲ್ಲಾ ಪಂಚಾಯತಿಗೆ ಎಷ್ಟು ಜನಸಂಖ್ಯೆಗೆ ಒಬ್ಬರಂತೆ ಸದಸ್ಯನು ಚುನಾಯಿತರಾಗಬೇಕು _____?

   ಅ) 40000-55000

   ಆ) 35000-45000

   ಇ) 40000-50000

www.karunaduexams.com

ಈ) 45000-50000

35000-45000

ಈ ಮುಂಚೆ 40000 ಜನಸಂಖ್ಯೆಗೆ ಒಬ್ಬ ಸದಸ್ಯನು ಚುನಾಯಿತರಾಗಬಹುದಾಗಿತ್ತು. ತಿದ್ದುಪಡಿ ನಂತರ 35000-45000 ಜನಸಂಖ್ಯೆಗೆ ಒಬ್ಬರಂತೆ ಸದಸ್ಯನು ಚುನಾಯಿತರಾಗಬೇಕು.

4. ಜಿಲ್ಲಾ ಪಂಚಾಯತಿ ಸದಸ್ಯರಿಗೆ ಸಂಬಂಧಿಸಿದಂತೆ ಈಕೆಳಗಿನ ಹೇಳಿಕೆಗಳನ್ನು ಗಮನಿಸಿ:

   ಅ) ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜನಸಂಖ್ಯೆ ಪ್ರತಿ 30000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು

   ಆ) ಬೆಂಗಳೂರು ನಗರ ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆ ಪ್ರತಿ 20000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು

   ಇ) ಕೊಡಗು ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆ ಪ್ರತಿ 15000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು.

   ಈ ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

   ಅ) ಹೇಳಿಕೆ ಒಂದು ಮಾತ್ರ

   ಆ) ಹೇಳಿಕೆ ಎರಡು ಮಾತ್ರ

   ಇ) ಹೇಳಿಕೆ ಒಂದು ಮತ್ತು ಎರಡು

   ಈ) ಮೇಲಿನ ಎಲ್ಲವೂ

   ಹೇಳಿಕೆ ಒಂದು ಮತ್ತು ಎರಡು

   ಮೇಲಿನ ಹೇಳಿಕೆಗಳಲ್ಲಿ ಹೇಳಿಕೆ ಒಂದು ಮತ್ತುಎರಡು ಸರಿ. ಕೊಡಗು ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆ ಪ್ರತಿ 18000 ಕ್ಕೆ ಒಬ್ಬ ಸದಸ್ಯರಿತಕ್ಕದ್ದು

5. ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಜನಗಣತಿಯಂತೆ ಜನಸಂಖ್ಯೆ ಆಧಾರದ ಮೇಲೆ ನಿರ್ಧರಿಸುವವರು ಯಾರು?

   ಅ) ಸರ್ಕಾರ

   ಆ) ಚುನಾವಣಾ ಆಯೋಗ

   ಇ) ರಾಜ್ಯಪಾಲರು

   ಈ) ಜಿಲ್ಲಾಧಿಕಾರಿ

   ಚುನಾವಣಾ ಆಯೋಗ

   ಪ್ರತಿಯೊಂದು ಜನಗಣತಿಯ ಅಂಕಿ-ಅಂಶಗಳನ್ನು ಪ್ರಕಟಿಸಿದ ಮೇಲೆ, ಜಿಲ್ಲಾ ಪಂಚಾಯತಿ ಚುನಾವಣಾ ಸದಸ್ಯರ ಸಂಖ್ಯೆಯನ್ನು ಆ ಜನಗಣತಿಯಲ್ಲಿ ಖಚಿತವಾದಂತೆ ಜಿಲ್ಲೆಯ ಜನಸಂಖ್ಯೆ ಆಧಾರದ ಮೇಲೆ ಚುನಾವಣಾ ಆಯೋಗ ನಿರ್ಧರಿಸುತ್ತದೆ.

www.karunaduexams.com

6. ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯನ್ನು ಇವರು ತಯಾರಿಸುವುದು _______?

ಅ) ತಹಶೀಲ್ದಾರ್

ಆ) ಉಪ ಜಿಲ್ಲಾಧಿಕಾರಿ

ಇ) ರಾಜ್ಯ ಚುನಾವಣಾ ಆಯೋಗ

ಈ) ಉಪವಿಭಾಗಧಿಕಾರಿ

ಉಪವಿಭಾಗಧಿಕಾರಿ

ಜಿಲ್ಲಾ ಪಂಚಾಯತಿ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಉಪವಿಭಾಗಧಿಕಾರಿ ತಯಾರಿಸುತ್ತಾರೆ.

7. ಜಿಲ್ಲಾ ಪಂಚಾಯತಿ ಅನುಮೋದನೆ ಪಡೆಯದೇ ಅನುಕ್ರಮವಾಗಿ ಎಷ್ಟು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದರೆ ಜಿಲ್ಲಾ ಪಂಚಾಯತ್ ಸದಸ್ಯನ ಸ್ಥಾನ ಖಾಲಿಯಾಗತಕ್ಕದ್ದು?

ಅ) ಎರಡು

ಆ) ಮೂರು

ಇ) ನಾಲ್ಕು

ಈ) ಐದು

ನಾಲ್ಕು

ಪ್ರಕರಣ 175ಕ್ಕೆ ತಿದ್ದುಪಡಿ ತರಲಾಗಿದ್ದು, ತಿದ್ದುಪಡಿಯಂತೆ ಸದಸ್ಯನು ನಾಲ್ಕು ಒಂದಾದ ಮೇಲೊಂದರಂತೆ ಆದ ಸಭೆಗಳಿಗೆ ಗೈರು ಹಾಜರಾದರೆ ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಅಗತ್ಯವಿದ್ದಾಗ ಸಭೆಯನ್ನು ಕರೆಯಲು ಒಂದಾದ ಮೇಲೊಂದರಂತೆ ಎರಡು ಸಭೆಗಳನ್ನು ಕರೆಯಲು ವಿಫಲನಾದರೆ ಸದಸ್ಯತ್ವ ರದ್ದಾಗುತ್ತದೆ ( ಸೂಚನೆ: ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರಿಗೂ ಮೇಲಿನ ನಿಬಂಧನೆ ಅನ್ವಯಿಸುತ್ತದೆ).

8. ಜಿಲ್ಲಾ ಪಂಚಾಯತಿಯ ಸದಸ್ಯರಾಗಲು ಇರುವ ಅನರ್ಹತೆ ಬಗ್ಗೆ ವಿವರಣೆ ನೀಡುವ ಪ್ರಕರಣ ______?

ಅ) ಪ್ರಕರಣ 164

ಆ) ಪ್ರಕರಣ 165

ಇ) ಪ್ರಕರಣ 167

ಈ) ಪ್ರಕರಣ 168

ಪ್ರಕರಣ 167

www.karunaduexams.com

9. ಜಿಲ್ಲಾ ಪಂಚಾಯತಿಗೆ ಆಯ್ಕೆಯಾದ ಸದಸ್ಯರುಗಳ ಹೆಸರನ್ನು ಯಾರಿಗೆ ವರದಿ ಮಾಡಬೇಕು?

ಅ) ಜಿಲ್ಲಾಧಿಕಾರಿ

ಆ) ರಾಜ್ಯಪಾಲರು

ಇ) ಸರ್ಕಾರ

ಈ) ಚುನಾವಣಾ ಆಯೋಘ

ಸರ್ಕಾರ

ಪ್ರಕರಣ 172 ರ ಪಕ್ರಾರ ಜಿಲ್ಲಾ ಪಂಚಾಯತಿಗೆ ಆಯ್ಕೆಯಾದ ಸದಸ್ಯರುಗಳ ಹೆಸರನ್ನು ಸರ್ಕಾರಕ್ಕೆ ವರದಿ ಮಾಡಬೇಕು ಹಾಗೂ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಆಗಬೇಕು.

10. ಯಾವ ಪ್ರಕರಣದಡಿ ದುರ್ನಡತೆ ಆಧಾರದ ಮೇಲೆ ಜಿಲ್ಲಾ ಪಂಚಾಯತಿ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡಬಹುದು?

ಅ) ಪ್ರಕರಣ 174

ಆ) ಪ್ರಕರಣ 175

ಇ) ಪ್ರಕರಣ 179

ಈ) ಪ್ರಕರಣ 180

ಪ್ರಕರಣ 175

ಪ್ರಕರಣ 175 ರಡಿ ಈ ಕೆಳಕಂಡ ಸಂದರ್ಭದಲ್ಲಿ ಸದಸ್ಯತ್ವವನ್ನು ರದ್ದುಮಾಡಬಹುದಾಗಿದೆ ಕರ್ತವ್ಯ ನಿರ್ವಹಿಸುವಾಗ ದುರ್ನಡತೆ ಅಥವಾ ತಲೆ ತಗ್ಗಿಸುವಂತಹ ತಪ್ಪು ಮಾಡಿದಾಗ, ಜಿಲ್ಲಾ ವೈದ್ಯಾಧಿಕಾರಿ ಪ್ರಮಾಣಿಕರಿಸಬಹುದಾದಂತೆ ಆ ಹುದ್ದೆಯನ್ನು ಹೊಂದಲು ವೈದ್ಯಕೀಯವಾಗಿ ಅನರ್ಹನಾದಾಗ, ನಾಲ್ಕು ಸಭೆಗಳಿಗೆ ಗೈರು ಹಾಜರಿಯಾದಾಗ, ಪಂಚಾಯತ್ ಕಾಮಗಾರಿಗಳಲ್ಲಿ ನೇರವಾಗಿ ಭಾಗಿಯಾದಾಗ (ಸೂಚನೆ: ಮೇಲಿನ ಎಲ್ಲವೂ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರಿಗು ಅನ್ವಯಿಸುತ್ತದೆ).

11. ______ ಪ್ರಕರಣದಡಿ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರು ಆಸ್ತಿ ಮತ್ತು ಹೊಣೆಗಾರಿಕೆ ಘೋಷಣೆ ಮಾಡಬೇಕು?

ಅ) ಪ್ರಕರಣ 175ಎ

ಆ) ಪ್ರಕರಣ 175ಬಿ

ಇ) ಪ್ರಕರಣ 176ಸಿ

ಈ) ಪ್ರಕರಣ 176ಬಿ

ಪ್ರಕರಣ 175ಎ

www.karunaduexams.com

ಪ್ರಕರಣ 175ಎ ರಡಿ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರು ಆಸ್ತಿ ಮತ್ತು ಹೊಣೆಗಾರಿಕೆ ಘೋಷಣೆ ಮಾಡಬೇಕು. ಪ್ರಕರಣ 175ಬಿ ಯಡಿ ಘೋಷಣೆ ದಾಖಲು ಮಾಡದಿದ್ದರೆ ಅಥವಾ ಸುಳ್ಳು ಮಾಹಿತಿ ದಾಖಲು ಮಾಡಿದರೆ ಸದಸ್ಯತ್ವ ನಿಂತು ಹೋಗುತ್ತದೆ.

12. ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ತಮ್ಮ ರಾಜೀನಾಮೆಯನ್ನು ಹಿಂತೆದುಕೊಳ್ಳಲು ಇರುವ ಅವಧಿ _________?

ಅ) 10 ದಿನ

ಆ) 12 ದಿನ

ಇ) 15 ದಿನ

ಈ) 20 ದಿನ

15 ದಿನ

ಜಿಲ್ಲಾ ಪಂಚಾಯತಿ ಅಧ್ಯಕ್ಷ ರಾಜೀನಾಮೆಯನ್ನು ಸರ್ಕಾರಕ್ಕೆ ನೀಡಬೇಕು. ಉಪಾಧ್ಯಕ್ಷ ಮತ್ತು ಸದಸ್ಯರು ರಾಜೀನಾಮೆಯನ್ನು ಅಧ್ಯಕ್ಷರಿಗೆ ನೀಡಬೇಕು. ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ತಮ್ಮ ರಾಜೀನಾಮೆಯನ್ನು 15 ದಿವಸದೊಳಗೆ ಹಿಂತೆದುಕೊಳ್ಳತಕ್ಕದ್ದು, ಇಲ್ಲವಾದಲ್ಲಿ ರಾಜೀನಾಮೆ ಅಂಗೀಕರವಾಗುವುದು.

13. ಜಿಲ್ಲಾ ಪಂಚಾಯತಿಯ ರಚನೆಯ ಬಗ್ಗೆ ಈ ಪ್ರಕರಣದಡಿ ಉಲ್ಲೇಖಿಸಲಾಗಿದೆ?

ಅ) ಪ್ರಕರಣ 157

ಆ) ಪ್ರಕರಣ 159

ಇ) ಪ್ರಕರಣ 158

ಈ) ಪ್ರಕರಣ 145

ಪ್ರಕರಣ 159

14. ಸಿದ್ದಪ್ಪ ಎಂಬ ವ್ಯಕ್ತಿಯು ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿದ್ದು, ಆದರೆ ಆತನ ಕುಟುಂಬ ಶೌಚಾಲಯ ಹೊಂದಿರದ ಕಾರಣ ಆತನು ______?

ಅ) ಚುನಾವಣೆಗೆ ಸ್ಪರ್ಧಿಸುವಂತಿಲ್ಲ

ಆ) ಶೌಚಾಲಯ ನಿರ್ಮಿಸಿ ಚುನಾವಣೆಗೆ ಸ್ಪರ್ಧಿಸುವುದು

ಇ) ಆಯ್ಕೆಯಾದ ವರ್ಷದೊಳಗೆ ನಿರ್ಮಿಸುವೆ ಎಂದು ಮುಚ್ಚಳಿಕೆ ಬರೆದುಕೊಟ್ಟು ಸ್ಪರ್ಧಿಸುವುದು

ಈ) ಶೌಚಾಲಯ ಹೊಂದಿರುವುದು ಕಡ್ಡಾಯವಲ್ಲ

www.karunaduexams.com

ಆಯ್ಕೆಯಾದ ವರ್ಷದೊಳಗೆ ಶೌಚಾಲಯ ನಿರ್ಮಿಸುವೆ ಎಂದು ಮುಚ್ಚಳಿಕೆ ಬರೆದುಕೊಟ್ಟು ಸ್ಪರ್ಧಿಸುವುದು. ಆಯ್ಕೆಯಾದ ಮೇಲೆ ವರ್ಷದೊಳಗೆ ಕಡ್ಡಾಯವಾಗಿ ಶೌಚಾಲಯ ನಿರ್ಮಿಸಿಕೊಳ್ಳಬೇಕು.

15. ಜಿಲ್ಲಾ ಪಂಚಾಯತಿ ನಿಧಿಯ ಲೆಕ್ಕಪತ್ರಗಳನ್ನು ಪರಿಶೋಧನೆ ಮಾಡುವವರು ಯಾರು?

ಅ) ಸರ್ಕಾರ ನೇಮಿಸಲ್ಪಟ್ಟ ಲೆಕ್ಕಪರಿಶೋಧನಕರು

ಆ) ಕಂಟ್ರೋಲರ್ ಅಂಡ್ ಆಡಿಟರ್ ಜನರಲ್

ಇ) ಸ್ಥಳೀಯ ಲೆಕ್ಕಪರಿಶೋಧನೆ ವರ್ತುಲ

ಈ) ಜಿಲ್ಲಾ ಪಂಚಾಯತಿ ನೇಮಿಸಿದ ಸಿಎ ಸಂಸ್ಥೆ

ಕಂಟ್ರೋಲರ್ ಅಂಡ್ ಆಡಿಟರ್ ಜನರಲ್

16. ಜಿಲ್ಲಾ ಪಂಚಾಯತಿ ಸದಸ್ಯರು ಯಾರಿಗೆ ರಾಜೀನಾಮೆಯನ್ನು ನೀಡಬೇಕು?

ಅ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಆ) ಜಿಲ್ಲಾಧಿಕಾರಿ

ಇ) ಜಿಲ್ಲಾ ಪಂಚಾಯತ್ ಅಧ್ಯಕ್ಷ

ಈ) ಉಪವಿಭಾಗಧಿಕಾರಿ

ಜಿಲ್ಲಾ ಪಂಚಾಯತ್ ಅಧ್ಯಕ್ಷ

17. ಜಿಲ್ಲಾ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಅಗತ್ಯವಿರುವ ಕೋರಂ ಒಟ್ಟು ಸದಸ್ಯರ_______?

ಅ) ಮೂರನೇ ಒಂದರಷ್ಟು

ಆ) ಅರ್ಧದಷ್ಟು

ಇ) ಮೂರನೇ ಎರಡರಷ್ಟು

ಈ) ಮೂರನೆ ಎರಡರಷ್ಟು

ಮೂರನೇ ಎರಡರಷ್ಟು

ಜಿಲ್ಲಾ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು ಅರ್ಧದಷ್ಟು ಚುನಾಯಿತ ಸದಸ್ಯರು ನೋಟಿಸನ್ನು ನೀಡಿದ ತರುವಾಯ ಮತ್ತು ಒಟ್ಟು ಚುನಾಯಿತ ಸದಸ್ಯರ ಪೈಕಿ ಮೂರನೇ ಎರಡು ಭಾಗದಷ್ಟು ಬಹುಮತ ಅಥವಾ ಕೋರಂ ಇದ್ದರೆ ಮಾತ್ರ ಅವಿಶ್ವಾಸ ನಿರ್ಣಯ ಮನ್ನಣೆಯಾಗುತ್ತದೆ. ಅವಿಶ್ವಾಸ ನಿರ್ಣಯನವ್ನು ಆಯ್ಕೆಯಾದ ದಿನಾಂಕದಿಂದ ಮೂವತ್ತು ತಿಂಗಳೊಳಗೆ ಮಂಡಿಸತಕ್ಕದ್ದಲ್ಲ.

18. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಸ್ಥಾನ ಈ ಕೆಳಗಿನ ಯಾವ ಹುದ್ದೆಗೆ ಸಮನಾಗಿದೆ?



www.karunaduexams.com

ಅ) ರಾಜ್ಯ ಸಭಾ ಸದಸ್ಯ

ಆ) ರಾಜ್ಯ ಸಚಿವರು

ಇ) ಲೋಕ ಸಭಾ ಸದಸ್ಯರು

ಈ) ರಾಜ್ಯ ವಿಧಾನಸಭಾ ಸ್ಪೀಕರ್

ರಾಜ್ಯ ಸಚಿವರು

ಪ್ರಸ್ತುತ ರಾಜ್ಯದ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಲಾಗಿದೆ. ಅದರಂತೆ ಅಧ್ಯಕ್ಷರು ಮಾಸಿಕ ವೇತನ ರೂ 35,000/- ಪಡೆಯಲಿದ್ದಾರೆ (ಸರ್ಕಾರ ಈ ಬಗ್ಗೆ ಈಗಾಗಲೇ ಆದೇಶ ಹೊರಡಿಸಿದೆ).

19. ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯ ನಡವಳಿ ಪುಸ್ತಕ ಯಾರ ಅಧೀನದಲ್ಲಿ ಇರತಕ್ಕದ್ದು?

ಅ) ಉಪಕಾರ್ಯದರ್ಶಿ

ಆ) ಸಹಾಯಕ ಕಾರ್ಯದರ್ಶಿ

ಇ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಈ) ಮುಖ್ಯಲೆಕ್ಕಾಧಿಕಾರಿ

ಮುಖ್ಯಕಾರ್ಯನಿರ್ವಾಹಣಾಧಿಕಾರಿ

20. ಈ ಕೆಳಗಿನ ಯಾವ ಅಧ್ಯಾಯ ಜಿಲ್ಲಾ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಿಗಳಿಗೆ ಸಂಬಂಧಿಸಿದೆ?

ಅ) ಅಧ್ಯಾಉ IX

ಆ) ಅಧ್ಯಾಯ XI

ಇ) ಅಧ್ಯಾಯ XII

ಈ) ಅಧ್ಯಾಯ XV

ಅಧ್ಯಾಯ XI

ಜಿಲ್ಲಾ ಪಂಚಾಯಿತಿ ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಅಧಿಕಾರಗಳನ್ನು ಅಧ್ಯಾಯ XI ರಡಿ ವಿವರಿಸಲಾಗಿದೆ.

21. ಜಿಲ್ಲಾ ಪಂಚಾಯತಿಯಲ್ಲಿ ಕನಿಷ್ಠ ಎಷ್ಟು ತಿಂಗಳಿಗೊಮ್ಮೆ ಸಾಮಾನ್ಯ ಸಭೆಯನ್ನು ಆಯೋಜಿಸತಕ್ಕದ್ದು?

ಅ) ಒಂದು

ಆ) ಎರಡು

ಇ) ಮೂರು

www.karunaduexams.com

ಈ) ನಾಲ್ಕು

ಎರಡು

ಜಿಲ್ಲಾ ಪಂಚಾಯತಿಯ ಕಾರ್ಯಕಲಾಪ ಸಭೆಯನ್ನು ಕನಿಷ್ಠ ಪಕ್ಷ ಎರಡು ತಿಂಗಳಲ್ಲಿ ಒಂದು ಬಾರಿ ನಡೆಸತಕ್ಕದ್ದು. ಜಿಲ್ಲಾ ಪಂಚಾಯತಿ ಪ್ರಥಮ ಸಭೆಯ ದಿನಾಂಕವನ್ನು ಅದರ ಮೊದಲ ರಚನೆಯ ಅಥವಾ ಪುನರ್ ರಚನೆಯ ತರುವಾಯ ಕಮೀಷನರ್ ಅವರು ನಿಗದಿಪಡಿಸತಕ್ಕದ್ದು. ಜಿಲ್ಲಾ ಪಂಚಾಯತಿಯ ಒಟ್ಟು ಸಂಖ್ಯೆಯ ಅರ್ಧದಷ್ಟು ಸದಸ್ಯರ ಸಂಖ್ಯೆ ಸಭೆಯ ಕೋರಂ ಆಗಿರುತ್ತದೆ.

22. ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳೆರಡೂ ತೆರವಾದಾಗ, ಯಾವ ಸಮಿತಿಯ ಅಧ್ಯಕ್ಷರು ತಾತ್ಕಲಿಕವಾಗಿ ಈ ಹುದ್ದೆಯ ಕರ್ತವ್ಯವನ್ನು ನಿರ್ವಹಿಸಬೇಕು?

ಅ) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಆ) ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ

ಇ) ಶಿಕ್ಷಣ ಮತ್ತು ಆರೋಗ್ಯ ಸಮಿತಿ

ಈ) ಕೃಷಿ ಮತ್ತು ಕೈಗಾರಿಕಾ ಸಮಿತಿ

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳೆರಡೂ ತೆರವಾದಲ್ಲಿ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು (ಸೂಚನೆ: ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳಿಗೂ ಇದು ಅನ್ವಯಿಸುತ್ತದೆ).

23. ಈ ಕೆಳಗಿನ ಯಾವುದು ಜಿಲ್ಲಾ ಪಂಚಾಯತಿ ಪ್ರಕಾರ್ಯ ಆಗಿಲ್ಲ?

ಅ) ಆರೋಗ್ಯ ಕೇಂದ್ರ ಮತ್ತು ಪ್ರಸೂತಿ ಕೇಂದ್ರವನ್ನು ಸ್ಥಾಪಿಸುವುದು

ಆ) ಜಿಲ್ಲೆಯ ಎಲ್ಲಾ ಕುಟುಂಬಗಳಿಗೆ ಶೌಚಾಲಯ ನಿರ್ಮಿಸುವುದು

ಇ) ಅಂತರ್ಜಲ ಕಾಪಾಡುವುದು

ಈ) ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಕೋರಿಕೆಗೆ ಸ್ಪಂದಿಸುವುದು

ಜಿಲ್ಲೆಯ ಎಲ್ಲಾ ಕುಟುಂಬಗಳಿಗೆ ಶೌಚಾಲಯ ನಿರ್ಮಿಸುವುದು

24. ಜಿಲ್ಲಾ ಪಂಚಾಯತಿಯಲ್ಲಿ ಸ್ಥಾಪಿಸಬೇಕಾದ ಸ್ಥಾಯಿ ಸಮಿತಿಗಳ ಸಂಖ್ಯೆ ಎಷ್ಟು?

ಅ) ಮೂರು

ಆ) ಐದು

ಇ) ಆರು

www.karunaduexams.com

ಈ) ಏಳು

ಐದು

ಪ್ರಕರಣ 186ರಡಿ ಜಿಲ್ಲಾ ಪಂಚಾಯತಿಯಲ್ಲಿ ಐದು ಸ್ಥಾಯಿ ಸಮಿತಿಗಳನ್ನು ರಚಿಸಬೇಕು ಅವುಗಳೆಂದರೆ ಸಾಮಾನ್ಯ ಸ್ಥಾಯಿ ಸಮಿತಿ (ಉಪಾಧ್ಯಕ್ಷರು ಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷರಾಗಿರುತ್ತಾರೆ), ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ (ಅಧ್ಯಕ್ಷರು ಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷರಾಗಿರುತ್ತಾರೆ), ಸಾಮಾಜಿಕ ನ್ಯಾಯ ಸಮಿತಿ , ಶಿಕ್ಷಣ ಮತ್ತು ಆರೋಗ್ಯ ಸಮಿತಿ ಹಾಗೂ ಕೃಷಿ ಮತ್ತು ಕೈಗಾರಿಕಾ ಸಮಿತಿ (ಈ ಮೂರು ಸಮಿತಿಗಳಿಗೆ ತಮ್ಮ ಸದಸ್ಯರುಗಳ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸತಕ್ಕದ್ದು).

25. ಈ ಕೆಳಗಿನ ಸ್ಥಾಯಿ ಸಮಿತಿಗಳಲ್ಲಿ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯಲ್ಲಿ ರಚಿಸದೇ ಜಿಲ್ಲಾ ಪಂಚಾಯತಿಯಲ್ಲಿ ಮಾತ್ರ ರಚಿಸಬಹುದಾದ ಸಮಿತಿಗಳು ಯಾವುವು?

I) ಸಾಮಾಜಿಕ ನ್ಯಾಯ ಸಮಿತಿ

II) ಶಿಕ್ಷಣ ಮತ್ತು ಆರೋಗ್ಯ ಸಮಿತಿ

III) ಕೃಷಿ ಮತ್ತು ಕೈಗಾರಿಕ ಸಮಿತಿ

IV) ಸಾಮಾನ್ಯ ಸ್ಥಾಯಿ ಸಮಿತಿ

ಸರಿಯಾದ ಉತ್ತರ ಯಾವುದು?

ಅ) I & II

ಆ) II & III

ಇ) III & IV

ಈ) I & IV

II & III

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಈ ಸಂಸ್ಥೆಗಳಲ್ಲಿ ಸಾಮಾನ್ಯವಾಗಿರುವ ಸಮಿತಿ ಎಂದರೆ ಸಾಮಾನ್ಯ ಸ್ಥಾಯಿ ಸಮಿತಿ, ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿ ಹಾಗೂ ಸಾಮಾಜಿಕ ನ್ಯಾಯ ಸಮಿತಿ. ಜಿಲ್ಲಾ ಪಂಚಾಯತಿಯಲ್ಲಿ  ಮಾತ್ರ ಶಿಕ್ಷಣ ಮತ್ತು ಆರೋಗ್ಯ ಸಮಿತಿ ಹಾಗೂ ಕೃಷಿ ಮತ್ತು ಕೈಗಾರಿಕ ಸಮಿತಿ ಸ್ಥಾಪಿಸಬೇಕು.

26. ಜಿಲ್ಲಾ ಪಂಚಾಯತಿಗಳಲ್ಲಿ ಸ್ಥಾಯಿ ಸಮಿತಿಗಳ ಸ್ಥಾಪನೆಗೆ ಅವಕಾಶ ಕಲ್ಪಿಸುವ ಪ್ರಕರಣವನ್ನು ಗುರುತಿಸಿ?

ಅ) ಪ್ರಕರಣ 179

www.karunaduexams.com

ಆ) ಪ್ರಕರಣ 181

ಇ) ಪ್ರಕರಣ 186

ಈ) ಪ್ರಕರಣ 187

ಪ್ರಕರಣ 186

27. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

ಅ) ಪ್ರತಿಯೊಂದು ಸ್ಥಾಯಿ ಸಮಿತಿಯು ಚುನಾಯಿತ ಅಧ್ಯಕ್ಷನು ಸೇರಿ ಏಳು ಜನ ಸದಸ್ಯರನ್ನು ಮಾತ್ರ ಒಳಗೊಂಡಿರತಕ್ಕದ್ದು.

ಆ) ಒಬ್ಬ ಸದಸ್ಯನು ಒಂದಕ್ಕಿಂತ ಹೆಚ್ಚು ಸಮಿತಿಗೆ ಸದಸ್ಯನಾಗಿರತಕ್ಕದ್ದಲ್ಲ

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಹೇಳಿಕೆ ಒಂದು ಮಾತ್ರ

ಪ್ರತಿಯೊಂದು ಸ್ಥಾಯಿ ಸಮಿತಿಯು ಚುನಾಯಿತ ಅಧ್ಯಕ್ಷನು ಸೇರಿ ಏಳು ಜನ ಸದಸ್ಯರನ್ನು ಮಾತ್ರ ಒಳಗೊಂಡಿರತಕ್ಕದ್ದು. ಪ್ರತಿಯೊಬ್ಬ ಸದಸ್ಯನ ಹುದ್ದೆಯ ಅವಧಿಯು ಆತನನ್ನು ಚುನಾಯಿಸಿದ ದಿನಾಂಕದಿಂದ ಇಪ್ಪತ್ತು ತಿಂಗಳು ಅಥವಾ ಅವನು ಜಿಲ್ಲಾ ಪಂಚಾಯತಿಯ ಸದಸ್ಯನಾಗಿರುವುದು ನಿಂತು ಹೋಗುವವರೆಗೆ, ಇದರಲ್ಲಿ ಯಾವುದು ಮೊದಲೋ ಆ ಅವಧಿ ಆಗಿರತಕ್ಕದ್ದು. ಜಿಲ್ಲಾ ಪಂಚಾಯತಿಯ ಯಾವ ಸದಸ್ಯನೂ ಎರಡಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಅರ್ಹನಾಗಿರುವುದಿಲ್ಲ.

28. ಮುಖ್ಯಕಾರ್ಯನಿರ್ವಾಹಣಾಧಿಕಾರಿಯು ಯಾವ ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ?

ಅ) ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ

ಆ) ಸಾಮಾನ್ಯ ಸ್ಥಾಯಿ ಸಮಿತಿ

ಇ) ಶಿಕ್ಷಣ ಮತ್ತು ಆರೋಗ್ಯ ಸಮಿತಿ

ಈ) ಕೃಷಿ ಮತ್ತು ಕೈಗಾರಿಕಾ ಸಮಿತಿ

ಸಾಮಾನ್ಯಸ್ಥಾಯಿ ಸಮಿತಿ

www.karunaduexams.com

ಮುಖ್ಯಕಾರ್ಯನಿರ್ವಾಹಣಾಧಿಕಾರಿಯು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಉಳಿದ ಸಮಿತಿಗಳಿಗೆ ಉಪಕಾರ್ಯದರ್ಶಿಗಳನ್ನು ಪದನಿಮಿತ್ತ ಕಾರ್ಯದರ್ಶಿಯಾಗಿ ಅವರು ನೇಮಕ ಮಾಡಬೇಕು.

29. ಈ ಕೆಳಗಿನ ಅಧಿಕಾರಿಗಳಲ್ಲಿ ಜಿಲ್ಲಾ ಪಂಚಾಯಿತಿ ಎಲ್ಲಾ ಸ್ಥಾಯಿ ಸಮಿತಿಗಳಲ್ಲಿ ಭಾಗವಹಿಸಲು ಹಕ್ಕುವುಳ್ಳವರು ಯಾರು?
   ಅ) ಮುಖ್ಯಕಾರ್ಯನಿರ್ವಾಹಣಾಧಿಕಾರಿ
   ಆ) ಉಪಕಾರ್ಯದರ್ಶಿ
   ಇ) ಮುಖ್ಯಲೆಕ್ಕಾಧಿಕಾರಿ
   ಈ) ಮುಖ್ಯಯೋಜನಾಧಿಕಾರಿ
   ಮುಖ್ಯಕಾರ್ಯನಿರ್ವಾಹಣಾಧಿಕಾರಿ

30. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳನ್ನು ವಿವರಿಸುವ ಪ್ರಕರಣಗಳು ಕ್ರಮವಾಗಿ _______?
   ಅ) ಪ್ರಕರಣ 191 ಮತ್ತು 192
   ಆ) ಪ್ರಕರಣ 192 ಮತ್ತು 193
   ಇ) ಪ್ರಕರಣ 193 ಮತ್ತು 194
   ಈ) ಪ್ರಕರಣ 194 ಮತ್ತು 195
   ಪ್ರಕರಣ 193 ಮತ್ತು 194
   ಪ್ರಕರಣ 193 ಜಿಲ್ಲಾ ಪಂಚಾಯತಿ ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ಹಾಗೂ ಪ್ರಕರಣ 194 ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿಸುತ್ತದೆ.

31. ಜಿಲ್ಲಾ ಪಂಚಾಯತಿ ಅಧ್ಯಕ್ಷರು ಜಿಲ್ಲೆಯಲ್ಲಿ ಉಂಟಾದ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ಎಷ್ಟು ರೂಪಾಯಿ ವರೆಗೆ ಮಂಜೂರೂತಿ ನೀಡುವ ಅಧಿಕಾರ ಹೊಂದಿದ್ದಾರೆ?
   ಅ) 1,00,000
   ಆ) 3,00,000
   ಇ) 5,00,000
   ಈ) 10,00,000
   5,00,000

www.karunaduexams.com

ಈ ಮುಂಚೆ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಜಿಲ್ಲೆಯಲ್ಲಿ ಉಂಟಾದ ಪ್ರಕೃತಿ ವಿಕೋಪ ಸಂದರ್ಭಗಳಲ್ಲಿ ರೂ ಒಂದು ಲಕ್ಷ ವರೆಗೆ ಮಂಜೂರೂತಿ ನೀಡುವ ಅಧಿಕಾರ ಹೊಂದಿದ್ದರು, ತಿದ್ದುಪಡಿ ನಂತರ ಈ ಅಧಿಕಾರವನ್ನು ಐದು ಲಕ್ಷಕ್ಕೆ ಹೆಚ್ಚಿಸಲಾಗಿದೆ.

32. ಜಿಲ್ಲಾ ಪಂಚಾಯತಿ ನಿಧಿಯಿಂದ ಹಣವನ್ನು ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರವನ್ನು ಇವರು ಹೊಂದಿದ್ದಾರೆ _______?

ಅ) ಮುಖ್ಯಲೆಕ್ಕಾಧಿಕಾರಿ

ಆ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಇ) ಜಿಲ್ಲಾ ಪಂಚಾಯತ್ ಗೊತ್ತುಪಡಿಸಿದ ಅಧಿಕಾರಿ

ಈ) ಮುಖ್ಯಯೋಜನಾಧಿಕಾರಿ

ಮುಖ್ಯಕಾರ್ಯನಿರ್ವಾಹಣಾಧಿಕಾರಿ

33. ಯಾವ ಪ್ರಕರಣದಡಿ ಗ್ರಾಮ ಪಂಚಾಯತಿ ತಾನು ವಿಧಿಸಬಹುದಾದ ತೆರಿಗೆಗಳನ್ನು ಪರಿಷ್ಕರಿಸಬಹುದಾಗಿದೆ?

ಅ) ಪ್ರಕರಣ 186

ಆ) ಪ್ರಕರಣ 189

ಇ) ಪ್ರಕರಣ 191

ಈ) ಪ್ರಕರಣ 199

ಪ್ರಕರಣ 199

34. ಯಾವುದೇ ಗ್ರಾಮ ಪಂಚಾಯತಿಯಲ್ಲಿ ವಿಧಿಸುವ ತೆರಿಗೆಯು ___ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಗರಿಷ್ಠ ದರವನ್ನು ಮೀರತಕ್ಕದ್ದಲ್ಲ?

ಅ) II ಅನುಸೂಚಿ

ಆ) III ಅನುಸೂಚಿ

ಇ) IV ಅನುಸೂಚಿ

ಈ) V ಅನುಸೂಚಿ

IV ಅನುಸೂಚಿ

35. ಗ್ರಾಮ ಪಂಚಾಯತಿಯಲ್ಲಿ ಪ್ರಕರಣ 199 ರಡಿ ವಿಧಿಸುವ ತೆರಿಗೆಗಳು ಮತ್ತು ದರಗಳನ್ನು ಎಷ್ಟುವರ್ಷಕ್ಕೊಮ್ಮೆ ಪರಿಷ್ಕರಿಸಬಹುದಾಗಿದೆ?

ಅ) ಒಂದು ವರ್ಷ

www.karunaduexams.com

ಆ) ಎರಡು ವರ್ಷ

ಇ) ಮೂರು ವರ್ಷ

ಈ) ನಾಲ್ಕು ವರ್ಷ

ಎರಡು ವರ್ಷ

36. ಗ್ರಾಮ ಪಂಚಾಯತಿ ಬಾಕಿ ಇರುವ ತೆರೆಗೆಯಲ್ಲಿ ವಾರ್ಷಿಕ ಶೇ ____ ರಷ್ಟು ವಸೂಲಿ ಮಾಡುವುದು ಕಡ್ಡಾಯವಾಗಿದೆ?

ಅ) 60

ಆ) 40

ಇ) 80

ಈ) 100

80

37. ಗ್ರಾಮ ಪಂಚಾಯತಿಗಳು ಇವುಗಳನ್ನು ಸ್ವೀಕರಿಸಲು ಅಧಿಕಾರ ಹೊಂದಿದೆ.

ಅ) ಸುಂಕ

ಆ) ತೆರಿಗೆ

ಇ) ಕರ

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

38. ತಗಾದೆ ಆದೇಶವನ್ನು ಹೊರಡಿಸಿ ಮೂವತ್ತು ದಿನದೊಳಗೆ ಸಂದಾಯ ಮಾಡಲು ವಿಫಲನಾದರೆ ಅಂಥವನ ಬಾಕಿ ಇರುವ ಮೊತ್ತದ ಮೇಲೆ ಶೇ ___ ರಷ್ಟು ದಂಡ ವಿಧಿಸಿ ವಸೂಲಿ ಮಾಡತಕ್ಕದ್ದು?

ಅ) ಶೇ 5

ಆ) ಶೇ 10

ಇ) ಶೇ 15

ಈ) ಶೇ 20

ಶೇ 10

39. ಗ್ರಾಮ ಪಂಚಾಯತಿಗಳಿಗೆ ಸರ್ಕಾರವು ವಾರ್ಷಿಕವಾಗಿ ರಾಜ್ಯ ಹಣಕಾಸು ಆಯೋಗ ನಿರ್ಧರಿಸಬಹುದಂತೆ ಅನುದಾನ ಹಂಚಿಕೆ ಮಾಡಬೇಕೆಂದು ತಿಳಿಸುವ ಪ್ರಕರಣ ______?

ಅ) ಪ್ರಕರಣ 210

www.karunaduexams.com

ಆ) ಪ್ರಕರಣ 206

ಇ) ಪ್ರಕರಣ 211

ಈ) ಪ್ರಕರಣ 216

ಪ್ರಕರಣ 206

40. ಯಾವ ಅಧ್ಯಾಯದಡಿ "ಪಂಚಾಯತಿ ಸ್ವತ್ತುಗಳು ಮತ್ತು ನಿಧಿಗಳ" ಬಗ್ಗೆ ಹೇಳಲಾಗಿದೆ?

ಅ) ಅಧ್ಯಾಯ XII

ಆ) ಅಧ್ಯಾಯ IX

ಇ) ಅಧ್ಯಾಯ XVI

ಈ) ಅಧ್ಯಾಯ XV

ಅಧ್ಯಾಯ XV

41. ಗ್ರಾಮ ಪಂಚಾಯತಿಯು ಸ್ವತ್ತನ್ನು ಅರ್ಜಿಸುವ, ಧಾರಣ ಮಾಡುವ ಮತ್ತು ವಿಲೇ ಮಾಡುವ ಪ್ರಕರಣ ಯಾವುದು?

ಅ) ಪ್ರಕರಣ 209

ಆ) ಪ್ರಕರಣ 211

ಇ) ಪ್ರಕರಣ 212

ಈ) ಪ್ರಕರಣ 213

ಪ್ರಕರಣ 209

42. ಗ್ರಾಮ ಪಂಚಾಯತಿಯ ಯಾವುದೇ ಯೋಜನೆಗಳಿಗೆ ಖಾತೆಯನ್ನು ________?

ಅ) ಸಮೀಪದ ಅಂಚೆ ಕಚೇರಿಯಲ್ಲಿ ತೆರೆಯಬಹುದು

ಆ) ಅನುಸೂಚಿತ ಬ್ಯಾಂಕ್ ನಲ್ಲಿ ತೆರೆಯುವುದು

ಇ) ಖಾಸಗಿ ಬ್ಯಾಂಕ್ ಗಳಲ್ಲಿ ತರೆಯಬಹುದು

ಈ) ಕೃಷಿ ಪತ್ತಿನ ಪ್ರಾಥಮಿಕ ಸಹಕಾರಿ ಬ್ಯಾಂಕ್ ನಲ್ಲಿ ತೆರೆಯುವುದು

ಅನುಸೂಚಿತ ಬ್ಯಾಂಕ್ ನಲ್ಲಿ ತೆರೆಯುವುದು

43. ಗ್ರಾಮ ಪಂಚಾಯತಿ ನಿಧಿಗೆ ಈ ಕೆಳಗಿನವುಗಳನ್ನು ಜಮೆ ಮಾಡತಕ್ಕದ್ದು:

ಅ) ಸರ್ಕಾರ, ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಯಿಂದ ಬಂದ ಮೊಬಲಗು

ಆ) ಗ್ರಾಮ ಪಂಚಾಯತಿ ವಿಧಿಸಿದ ತೆರಿಗೆ, ದರ ಮತ್ತು ಫೀಜು

ಇ) ಸಾಲ ಅಥವಾ ಕಾಣಿಕೆ ರೂಪದಲ್ಲಿ ಗ್ರಾಮ ಪಂಚಾಯತಿಗೆ ಸ್ವೀಕರಿಸಲಾದ ಮೊಬಲಗು

www.karunaduexams.com

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

44. ಗ್ರಾಮ ಪಂಚಾಯತಿಯಿಂದ ಅಥವಾ ವಿರುದ್ದವಾಗಿ ಸ್ವತ್ತಿನ ಕ್ಲೇಮುಗಳ ಬಗ್ಗೆ ವಿಚಾರಣೆ ಮಾಡುವವರು ________?

ಅ) ತಹಶೀಲ್ದಾರ್

ಆ) ಉಪವಿಭಾಗಧಿಕಾರಿ

ಇ) ಜಿಲ್ಲಾಧಿಕಾರಿ

ಈ) ತಾಲ್ಲೂಕ್ ಸಿವಿಲ್ ನ್ಯಾಯಾಧೀಶರು

ಉಪವಿಭಾಗಧಿಕಾರಿ

45. ಗ್ರಾಮ ಪಂಚಾಯತಿಯ ನಿಧಿಯನ್ನು ಈ ಕೆಳಗಿನ ಯಾವುದಕ್ಕೆ ಉಪಯೋಗಿಸಬಹುದಾಗಿದೆ?

ಅ) ಚುನಾಯಿತ ಸದಸ್ಯರ ಗೌರವ ಧನ, ಪ್ರಯಾಣ ಭತ್ಯೆ

ಆ) ಗ್ರಾಮ ಪಂಚಾಯತ್ ಸಿಬ್ಬಂದಿಗಳ ವೇತನಕ್ಕೆ

ಇ) ಪಂಚಾಯತಿ ಮೇಲಿರುವ ಸಾಲ ಪಾವತಿಸಲು

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

46. ಗ್ರಾಮ ಪಂಚಾಯತಿಯು ಸಾಲಗಳನ್ನು ಎತ್ತಬಹುದು ಮತ್ತು ಋಣ ಪರಿಹಾರ ನಿಧಿಯನ್ನು ರಚಿಸಬಹುದು. ಆದರೆ ಇದಕ್ಕೆ _______ ರಿಂದ ಪೂರ್ವಾನುಮತಿ ಪಡೆಯಬೇಕು?

ಅ) ಸರ್ಕಾರ

ಆ) ಜಿಲ್ಲಾ ಪಂಚಾಯತಿ

ಇ) ತಾಲ್ಲೂಕು ಪಂಚಾಯತಿ

ಈ) ಗ್ರಾಮ ಸಭೆ

ಸರ್ಕಾರ

ಗ್ರಾಮ ಪಂಚಾಯತಿಯು, ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ ಮತ್ತು ಕಾಲಕಾಲಕ್ಕೆ ಅದು ವಿಧಿಸುವ ಷರತ್ತಿಗೆ ಒಳಪಟ್ಟು ಲಗಳನ್ನು ಎತ್ತಬಹುದು ಮತ್ತು ಋಣ ಪರಿಹಾರ ನಿಧಿಯನ್ನು ರಚಿಸಬಹುದು.

47. ________ ಪ್ರಕರಣದಡಿ ಪ್ರತಿ ತಾಲ್ಲೂಕು ಪಂಚಾಯತಿಯಲ್ಲಿ ತಾಲ್ಲೂಕು ಪಂಚಾಯತಿ ನಿಧಿಯನ್ನು ಸ್ಥಾಪಿಸತಕ್ಕದ್ದು?

ಅ) ಪ್ರಕರಣ 218



www.karunaduexams.com

ಆ) ಪ್ರಕರಣ 219

ಇ) ಪ್ರಕರಣ 220

ಈ) ಪ್ರಕರಣ 221

ಪ್ರಕರಣ 218

ಪ್ರಕರಣ 218ರಡಿ ಪ್ರತಿಯೊಂದು ತಾಲ್ಲೂಕು ಪಂಚಾಯತಿಗೆ ತಾಲ್ಲೂಕು ಪಂಚಾಯಿತಿ ನಿಧಿಯನ್ನು ಸ್ಥಾಪಿಸಬೇಕು. ತಾಲ್ಲೂಕು ಪಂಚಾಯತಿ ನಿಧಿಗೆ ಜಮೆಯಾಗುವ ಮೊತ್ತಗಳನ್ನು ತಾಲ್ಲೂಕಿನ ಸರ್ಕಾರಿ ಖಜಾನೆಯಲ್ಲಿ ಇಡತಕ್ಕದ್ದು.

48. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಹುದ್ದೆಯ ಅವಧಿ ___?

ಅ) ಎರಡು ವರ್ಷ

ಆ) ಎರಡುವರೆ ವರ್ಷ

ಇ) ಮೂರು ವರ್ಷ

ಈ) ಐದು ವರ್ಷ

ಐದು ವರ್ಷ

49. ಜಿಲ್ಲಾ ಪಂಚಾಯತಿಯ ಅಥವಾ ವಿರುದ್ಧವಾಗಿ ಸ್ವತ್ತಿನ ಕ್ಲೇಮುಗಳ ಬಗ್ಗೆ ವಿಚಾರಣೆ ಮಾಡುವವರು ________?

ಅ) ಜಿಲ್ಲಾ ಪಂಚಾಯತಿ ಅಧ್ಯಕ್ಷರು

ಆ) ಜಿಲ್ಲಾಧಿಕಾರಿ

ಇ) ಉಪವಿಭಾಗಧಿಕಾರಿ

ಈ) ಸರ್ಕಾರ

ಜಿಲ್ಲಾಧಿಕಾರಿ

50.

I) ಗ್ರಾಮ ಪಂಚಾಯತಿ

II) ತಾಲ್ಲೂಕು ಪಂಚಾಯತಿ

III) ಜಿಲ್ಲಾ ಪಂಚಾಯತಿ

ಮೇಲಿನ ಗ್ರಾಮ ಪಂಚಾಯತ್ ಸಂಸ್ಥೆಗಳ ಪೈಕಿ ಯಾರಿಗೆ ತೆರಿಗೆ ವಿಧಿಸುವ ಅಧಿಕಾರವಿದೆ?

ಅ) I ಮಾತ್ರ

ಆ) I & II ಮಾತ್ರ

ಇ) I & III ಮಾತ್ರ

ಈ) ಮೇಲಿನ ಎಲ್ಲವೂ

www.karunaduexams.com

I ಮಾತ್ರ

www.karunaduexams.com